ಪೌರ ಕಾರ್ಮಿಕರ ಮಕ್ಕಳಿಗೆ ಹಾಸ್ಟಲ್‌ಗಳಲ್ಲಿ ಆದ್ಯತೆ ಸಿಗುತ್ತಿಲ್ಲ. ಆರ್ಥಿಕವಾಗಿ ಮುಂದುವರಿದಿರತಕ್ಕ ಕೋಮಿನವರು ರಾಜಕೀಯ ಪ್ರಭಾವ ಇರತಕ್ಕವರಿಗೆ ಜಿಲ್ಲಾಮಟ್ಟದಲ್ಲಿ ಮತ್ತು ತಾಲ್ಲೂಕುಮಟ್ಟದಲ್ಲಿ ಹಾಸ್ಟಲ್‌ಗಳಲ್ಲಿ ಅವಕಾಶ ಸಿಗುತ್ತಿದೆ, ಈ ತರಹ ಅ ನ್ಯಾಯವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದರೆ ಅದನ್ನು ತಡೆಯುವುದಕ್ಕೆ ಏನು ಪ್ರಯತ್ನ ಮಾಡಿದ್ದೀರಿ ?

ಶ್ರೀಮತಿ ಚಂದ್ರಪ್ರಭಾ ಅರಸ್ . – ಮಾನ್ಯ ಸದಸ್ಯರು ಬಹಳ ಮುಖ್ಯವಾದ ಪ್ರಶ್ನೆಯನ್ನು ಕೇಳುತ್ತಿದ್ದಾರೆ. ಅದರ ಅವ್ಯವಸ್ಥೆಗೆ ನಾವು ಕಾರಣ ಎನ್ನುವುದನ್ನೂ ಕೂಡ ಅವರೇ ಒಪ್ಪಿಕೊಂಡಿದ್ದಾರೆ. ಜಿಲ್ಲಾಮಟ್ಟ ಮತ್ತು ತಾಲ್ಲೂಕು ಮಟ್ಟದಲ್ಲಿರತಕ್ಕ ಸಮಿತಿಗಳಲ್ಲಿ ಪ್ರಜಾಪ್ರತಿನಿಧಿಗಳು ಸ್ಥಳೀಯ ಶಾಸಕರು ಕೆಲವು ಕಡೆ ಲೋಕಸಭಾ ಸದಸ್ಯರುಗಳು ಇರುತ್ತಾರೆ. ಆಗಾಗ ಕಮಿಟಿ ಮೀಟಿಂಗ್ ಸೇರುತ್ತಾರೆ ಸಂಬಂಧಪಟ್ಟ ಸಮಸ್ಯೆಗಳ ಬಗ್ಗೆ ಚರ್ಚಿಸಿ ಸೂಕ್ತ ಪರಿಹಾರ ಒದಗಿಸಿದ್ದು ಇದುವರೆಗೆ ನನ್ನ ಗಮನಕ್ಕೆ ಬಂದಿಲ್ಲ. ಕಮಿಟಿಗಳನ್ನು ಹೊಸದಾಗಿ ನೇಮಿಸಬೇಕು. ಸ್ವಯಂಸೇವಕ ಸಂಘ ಸಂಸ್ಥೆಗಳನ್ನು ನೇಮಿಸ ಬೇಕೆಂದು ನಾನು ತೀವ್ರವಾಗಿ ಪರಿಶೀಲನೆ ಮಾಡುತ್ತಿದ್ದೇನೆ ಮಾನ್ಯ ಸದಸ್ಯರಿಗೆ ಗೊತ್ತಿದೆ, ಎಂತಹ ಜನ ಇದ್ದರೂ ಕೆಲಸಗಳ ಬಗ್ಗೆ ಗಮನಹರಿಸಿಲ್ಲ ಎನ್ನುವುದು ತಮಗೆ ತಿಳಿದಿರಬಹುದು.

ಶ್ರೀ ಎನ್. ಜಿ. ನಾಯಕ್ .— ರಾಜ್ಯದಲ್ಲಿ ಹಾಸ್ಟಲ್‌ಗಳ ಸಂಖ್ಯೆ ಬಹಳ ಕಡಿಮೆ ಇದೆ. ಹಳ್ಳಿ ಗಳಿಂದ ೧೦೦ ಜನ ಮಕ್ಕಳು ಹಾಸ್ಟಲ್‌ಗೆ ಸೇರಬೇಕೆಂದು ಬಂದರೆ ಅವರಲ್ಲಿ ೫೦ ಮಕ್ಕಳಿಗೆ ಮಾತ್ರ ಸೀಟು ಸಿಗುತ್ತದೆ. ೫೦ ಮಕ್ಕಳು ಎಲ್ಲಿಗೆ ಹೋಗಬೇಕು ? ನೀವು ಸ್ಕಾಲರ್‌ಷಿಪ್ ಕೊಟ್ಟರೆ ಅದು ಸಾಕಾಗುವು ದಿಲ್ಲ. ಉಳಿದ ಮಕ್ಕಳು ವಿದ್ಯಾಭ್ಯಾಸ ಮಾಡಲಿಕ್ಕೆ ಏನು ವ್ಯವಸ್ಥೆ ಮಾಡುತ್ತೀರಿ ? ಎಲ್ಲರಿಗೂ ಸ್ಕಾಲರ್ ಷಿಪ್ ಸಿಗುವುದಿಲ್ಲ ಇದರ ಬಗ್ಗೆ ಹೇಳಬೇಕು.

ಶ್ರೀಮತಿ ಚಂದ್ರಪ್ರಭಾ ಅರಸ್ .— ವಾರ್ಷಿಕ ವರಮಾನದ ಬಗ್ಗೆ ತಾಲ್ಲೂಕು ಅಧಿಕಾರಿಗಳು ಸರ್ಟಿಫಿಕೇಟ್ ಕೊಡುತ್ತಾರೆ ಅದರ ಆಧಾರದ ಮೇಲೆ ಎಲ್ಲಾ ಕಡೆಗಳಲ್ಲೂ ಸ್ಥಳಾವಕಾಶ ಮಾಡಲಿಕ್ಕೆ ಅವಕಾಶವಿದೆ.

ಶ್ರೀ ಗೋವಿಂದ ಪಿ. ಒಡೆಯರಾಜ್ .— ರಾಜ್ಯದಲ್ಲಿ ಹೆಣ್ಣುಮಕ್ಕಳ ಹಾಸ್ಟಲ್‌ಗಳು ಬಹಳ ಕಡಿಮೆ ಸಂಖ್ಯೆಯಲ್ಲಿವೆ. ಹೆಣ್ಣು ಮಕ್ಕಳ ಹಾಸ್ಟಲ್‌ಗಳ ಸಂಖ್ಯೆಯನ್ನು ಜಾಸ್ತಿ ಮಾಡಲಿಕ್ಕೆ ವಿಶೇಷ ಕಾರ್ಯ ಕ್ರಮ ಹಾಕಿಕೊಂಡಿದ್ದೀರಾ ?

ಶ್ರೀಮತಿ ಚಂದ್ರಪ್ರಭಾ ಅರಸ್ .— ಮಾನ್ಯ ಸದಸ್ಯರು ಈಗಲಾದರೂ ಹೆಣ್ಣು ಮಕ್ಕಳ ಹಾಸ್ಟಲ್‌ಗಳ ಬಗ್ಗೆ ತೀವ್ರವಾಗಿ ಗಮನಹರಿಸಿರುವುದು ಬಹಳ ಸಂತೋಷವೆನಿಸುತ್ತದೆ. ಗ್ರಾಮಾಂತರ ಪ್ರದೇಶಗಳಲ್ಲಿ ಹೆಣ್ಣುಮಕ್ಕಳ ಹಾಸ್ಟಲ್‌ಗಳನ್ನು ತೆಗೆಯಬೇಕಾದ್ದು ಅವಶ್ಯವಿದೆ. ಕೇಂದ್ರ ಸರ್ಕಾರ ದಿಂದ ಬರತಕ್ಕ ಧನಸಹಾಯವನ್ನು ನಮ್ಮ ರಾಜ್ಯ ಸರ್ಕಾರ ಸರಿಯಾಗಿ ಉಪಯೋಗ ಮಾಡಿಕೊಂಡಿಲ್ಲ. ಕೇಂದ್ರ ಸರ್ಕಾರದ ಧನ ಸಹಾಯವನ್ನು ಸಾಧ್ಯವಾದಷ್ಟು ಉಪಯೋಗ ಮಾಡಿಕೊಂಡು ಹಾಸ್ಟಲ್ ಒದಗಿಸಿ ಕೊಡುವುದಕ್ಕೆ ಕಾರ್ಯಕ್ರಮ ಹಾಕಿಕೊಳ್ಳುತ್ತೇವೆ. ಹರಿಜನ-ಗಿರಿಜನ ಹೆಣ್ಣುಮಕ್ಕಳ ೫೦ ಹಾಸ್ಟಲ್‌ಗಳನ್ನು ಪ್ರಾರಂಭ ಮಾಡುತ್ತೇವೆ.

ತುರುವೇಕೆರೆ ತಾಲ್ಲೂಕಿನಲ್ಲಿ ಬಸ್ಸುಗಳ ಅಭಾವ

೨೪ ಶ್ರೀ ಬೈರಪ್ಪಾಜಿ (ತುರುವೇಕೆರೆ).—ಮಾನ್ಯ ರಾಜ್ಯ ಸಾರಿಗೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ತಾಲ್ಲೂಕಿನ ಕೇಂದ್ರವಾದ ತುರುವೇಕೆರೆ ಹಾಗೂ ತಾಲ್ಲೂಕಿನ ನಾನಾ ಹೋಬಳಿ ಕೇಂದ್ರ ಗಳಿಗೆ ತುಮಕೂರು, ಬೆಂಗಳೂರು ಮೈಸೂರು, ಹಾಗೂ ಶಿವಮೊಗ್ಗ ಕಡೆಗಳಿಂದ ಸಾಕಷ್ಟು ಸಂಖ್ಯೆಯಲ್ಲಿ ಬಸ್ಸುಗಳನ್ನು ಓಡಿಸದೇ ಇದ್ದುದರಿಂದ ಬಸ್‌ಗಳಸೌಕರ್ಯ ಸಾಕಷ್ಟು ಇಲ್ಲದೆ ಜನರಿಗೆ ತೊಂದರೆಯಾಗಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಆ) ಈ ಬಗ್ಗೆ ಜನರಿಗೆ ಆಗುತ್ತಿರುವ ಅನಾನುಕೂಲದ ಬಗೆಗೆ ಕ್ಷೇತ್ರದ ಶಾಸಕರು ಹಾಗೂ ಸಾರ್ವಜನಿಕರಿಂದ ಮನವಿಗಳು ಬಂದಿರುವುದು ನಿಜವೇ.

ಇ) ಹಾಗಿದ್ದಲ್ಲಿ ಬಸ್ಸುಗಳನ್ನು ಸಾಕಷ್ಟು ಸಂಖ್ಯೆಯಲ್ಲಿ ಓಡಿಸಿ ಜನರಿಗೆ ಆಗುತ್ತಿರುವ ಅನಾನುಕೂಲಗಳನ್ನು ತಪ್ಪಿಸಲು ಸರಕಾರದವರು ಕೈಗೊಂಡಿರುವ ಕ್ರಮಗಳಾವುವು ?

ಶ್ರೀ ಎಂ. ಪಿ. ಪ್ರಕಾಶ್ (ರಾಜ್ಯ ಸಾರಿಗೆ ಮಂತ್ರಿಗಳು).—

ಅ) ತುರುವೇಕೆರೆ ತಾಲ್ಲೂಕಿನಲ್ಲಿ ಬಸ್ಸಿನ ಸೌಕರ್ಯ ಸಾಕಷ್ಟು ಇಲ್ಲವೆಂಬ ಬಗ್ಗೆ ಕೆಲವು ಅರ್ಜಿಗಳು ಬಂದಿವೆ.

ಆ) ಹೌದು ಅರ್ಜಿಗಳು ಬಂದಿವೆ.

ಇ) ತುರುವೇಕೆರೆ ವಲಯದಲ್ಲಿ ೨೧ ಹೊಸ ಮಾರ್ಗಗಳಲ್ಲಿ ವಾಹನಗಳನ್ನು ಓಡಿಸಲಾಗುತ್ತಿದೆ.

ಶ್ರೀ ಬಿ. ಬೈರಪ್ಪಾಜ್ಜಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾ, ೨೧ ಹೊಸ ಮಾರ್ಗಗಳನ್ನು ಕಲ್ಪಿಸಿ ಅಲ್ಲಿ ನಾವು ಬಸ್ಸುಗಳನ್ನು ಓಡಿಸುತ್ತಿದ್ದೇವೆಂದು ಹೇಳಿದರು ಆ ಹೊಸ ಮಾರ್ಗಗಳು ಯಾವುವು? ಎಷ್ಟು ದಿವಸಗಳಿಂದ ಬಸ್ಸುಗಳನ್ನು ಓಡಿಸುತ್ತಿದ್ದೀರಿ, ಮತ್ತು ಎಷ್ಟು ಬಸ್ಸುಗಳನ್ನು ಓಡಿಸುತ್ತಿದ್ದೀರಿ? ಒಂದು ವೇಳೆ ಬಸ್ಸುಗಳನ್ನು ಓಡಿಸದಿದ್ದರೆ ಅದಷ್ಟು ಬೇಗ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಂ.ಪಿ. ಪ್ರಕಾಶ್.—ಮಾನ್ಯ ಅಧ್ಯಕ್ಷರೇ ಹೊಸದಾಗಿ ಸುಮಾರು ೨೧ ಬಸ್ಸು ರೂಟ್‌ಗಳನ್ನು ಕಲ್ಪಿಸಿ ಬಸ್ಸುಗಳನ್ನು ಓಡಿಸುತ್ತಿದ್ದೇವೆ. ಆ ರೂಟ್‌ಗಳನ್ನು ಓದುವುದಕ್ಕೆ ತಾವು ಅನುಮತಿ ಕೊಟ್ಟರೆ ನಾನು ಓದುತ್ತೇನೆ.

ಅಧ್ಯಕ್ಷರು.—ಆ ಪಟ್ಟಿಯನ್ನು ಮಾನ್ಯ ಸದಸ್ಯರಿಗೆ ಕಳುಹಿಸಿಕೊಟ್ಟರೆ ಸಾಕು.

ಶ್ರೀ ಎಂ. ಪಿ ಪ್ರಕಾಶ್.—ಮತ್ತೆ ದಿನಾಂಕ ೨೨-೬-೧೯೬೩ ರಂದು ಮಾನ್ಯ ಸದಸ್ಯರು ನನಗೆ ಒಂದು ಪತ್ರವನ್ನು ಬರೆದು ಆ ಪತ್ರದಲ್ಲಿ ತಾವು ಹೊಸ ಮಾರ್ಗಗಳಲ್ಲಿ ಬಸ್ಸುಗಳನ್ನು ಓಡಿಸಿ ನಮ್ಮ ಭಾಗದ ಜನರ ಪ್ರಶಂಸೆಗೆ ಒಳಗಾಗಿದ್ದೀರಿ ಎನ್ನುವ ಮಾತನ್ನು ಕೂಡ ಅವರು ಹೇಳಿದ್ದಾರೆ.

ಶ್ರೀ ವಿ ಎಸ್. ಆಚಾರ್ಯ.—ಸರ್ಕಾರಕ್ಕೆ ಪ್ರಶಂಸೆಯನ್ನು ಕೊಟ್ಟರೆ ನಮಗೆ ಅಪಾಯ.

ಅಧ್ಯಕ್ಷರು.—ತಾವೇ ಒಪ್ಪಿಕೊಂಡ ಮೇಲೆ ಮತ್ತೆ ಪ್ರಶ್ನೆ ಕೇಳುವ ಅವಶ್ಯಕತೆ ಇಲ್ಲವೆಂದು ನನ್ನ ಅಭಿವ್ರಾಯ.

ವಿಷಯ : ಕುಂದುಕೊರತೆಗಳ ವಿಭಾಗದಲ್ಲಿರುವ ದೂರುಗಳನ್ನು ವಿಲೇವಾರಿ ಮಾಡಲು ಸಿಬ್ಬಂದಿ ವರ್ಗ.

೭೩ (೫೨). ಡಾ. ವಿ. ಎಸ್. ಆಚಾರ್ಯ (ಉಡುಪಿ).—ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳ ಹಾಗೂ ವಸತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ.—

ಅ) ಸಂಕಷ್ಟ ನಿವಾರಣೆಯ ಖಾತೆಯ ಮಂತ್ರಿಯವರ ಬಳಿ ಬಂದ ದೂರನ್ನು ವಿಲೇವಾರಿ ಮಾಡಲು ಏನು ಸಾಂಸ್ಥಿಕ ವ್ಯವಸ್ಥೆ ಮಾಡಲಾಗಿದೆ ;

ಆ) ಈ ಬಗ್ಗೆ ಎಷ್ಟು ಸಿಬ್ಬಂದಿಗಳನ್ನು ಒದಗಿಸಲಾಗಿದೆ?

ಶ್ರೀ ಎ. ಲಕ್ಷ್ಮಿಸಾಗರ್.—ಕಾನೂನು ಮತ್ತು ಸಂಸದೀಯ ವ್ಯವಹಾರ, ವಸತಿ ಹಾಗೂ ಕುಂದು ಕೊರತೆಗಳ ಸಚಿವರು)

ಅ) ಸಾರ್ವಜನಿಕರ ಕುಂದುಕೊರತೆಗಳನ್ನು ವಿಚಾರಿಸಲು ಮತ್ತು ನಿವಾರಿಸಲು ಸಿಬ್ಬಂದಿ ಮತ್ತು ಆವಶ್ಯಕ ಸುಧಾರಣಾ ಇಲಾಖೆಯ ಅಧೀನದಲ್ಲಿ ಒಂದು ಸಂಸ್ಥೆಯನ್ನು ರಚಿಸಲಾಗಿದೆ.